# ಆರೋಗ್ಯಪಾಲನೆಗೆ ಸರಳ ವಿಧಾನಗಳು

ಡಾ. ಬಿ.ಎಂ. ಹೆಗಡೆ

**"ಘಟನೆಗಳು ನಡೆಯುವ ಮೊದಲೇ ಅವುಗಳ ಸುಳಿವು ತಿಳಿಯುತ್ತದೆ" – ಸಿಸಿರೋ**

## ವೈದ್ಯಕೀಯ ಚಿಕಿತ್ಸೆ ಮಾತ್ರವೇ ಆರೋಗ್ಯ ರಕ್ಷಣೆಯೇ?

ಕೆಲವೊಂದು ಪ್ರಚಲಿತ ಸಂಗತಿಗಳನ್ನು ಪಟ್ಟಿಮಾಡೋಣ: ರೋಗಗಳಿಗೆ ವೈದ್ಯರು ಗೊತ್ತುಪಡಿಸುವ ಔಷಧಿಗಳನ್ನು ರೋಗಿಗಳಿಗೆ ಆಸ್ಪತ್ರೆಗಳು ಒದಗಿಸುತ್ತವೆ. ತೀವ್ರ ರೋಗರುಜಿನಗಳಿಂದ ಆರೋಗ್ಯಕ್ಕೆ ಸಾಕಷ್ಟು ಹಾನಿಯಾದ ಅನಂತರವಷ್ಟೇ ಆ ದೇಹದ ಅಂಗಾಂಗಗಳನ್ನು ಯಾವುದೋ ರೀತಿಯಲ್ಲಿ ಮರುಜೋಡಿಸಿ, ಅಷ್ಟಿಷ್ಟು ರಿಪೇರಿ ಮಾಡುವುದಷ್ಟೇ ವೈದ್ಯಕೀಯ ತಂತ್ರಜ್ಞಾನದ ಕೆಲಸ. ಉತ್ತಮ ಆರೋಗ್ಯರಕ್ಷಣೆಗೆ ಆಗಾಗ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯವೆಂದು ಶ್ರೀಮಂತರಾದವರು ಭಾವಿಸುತ್ತಾರೆ. ಪ್ರತಿಯೊಂದು ನವಜಾತ ಶಿಶುವಿಗೂ ಬಗೆಬಗೆಯ ೧೯–೨೦ ಲಸಿಕೆಗಳನ್ನು ಸರ್ಕಾರ ಉಚಿತವಾಗಿಯೇ ಒದಗಿಸುತ್ತದೆ. ಮಕ್ಕಳನ್ನು ಆರೋಗ್ಯವಂತರಾಗಿ ಇರಿಸಲು, ಅವುಗಳಿಗೆ ಕಾಯಿಲೆಗಳು ಬಾರದಂತೆ ತಡೆಯಲು ಇವು ಆವಶ್ಯಕ ಎಂದು ತಂದೆತಾಯಿಗಳೂ ನಂಬಿದ್ದಾರೆ. ಈ ಲಸಿಕೆಗಳಲ್ಲಿ ಕೆಲವು ಸಂಮಿಶ್ರ ಲಸಿಕೆಗಳು (combinations). ವೈದ್ಯಕೀಯ ಕ್ಷೇತ್ರದಲ್ಲಿ ಪ್ರತಿದಿನ ಹೊಸಹೊಸ ಸಂಶೋಧನೆಗಳು ನಡೆಯುತ್ತಿವೆ. ಗುಣಪಡಿಸಲಾಗದ ರೋಗಗಳೆಲ್ಲದಕ್ಕೂ ಜೀವಕೋಶ ಸ್ಥಳಾಂತರ ಮತ್ತು ಅಂಗಾಂಗಗಳ ಮರುಜೋಡಣೆಯಂತಹ ವಿಧಾನಗಳನ್ನು ರಾಮಬಾಣವೋ ಎಂಬಂತೆ ತಜ್ಞವೈದ್ಯರು ಪ್ರಯೋಗಿಸುತ್ತಿದ್ದಾರೆ.

ಇದಲ್ಲದೆ, ಜನಸಾಮಾನ್ಯರ ಆರೋಗ್ಯರಕ್ಷಣೆಗಾಗಿ ವಿವಿಧ ವೈದ್ಯಕೀಯ ವಿಮಾ ಸೌಲಭ್ಯಗಳಿವೆ. ಆದರೆ ಅವು ಎಲ್ಲೆಡೆ ಯಶಸ್ವಿಯಾಗಿಲ್ಲ ಎಂದೇ ಹೇಳಬೇಕು. ಹೃದಯದಲ್ಲಿ ರಂಧ್ರವಿರುವ ಅಥವಾ ಮಾರಕ ಕ್ಯಾನ್ಸರ್‌ಗೆ ಬಲಿಯಾಗಿರುವ ಮಕ್ಕಳನ್ನು ಜನಾನುಕಂಪವನ್ನು ಸೆಳೆಯುವ ಒಂದೇ ಕಾರಣಕ್ಕಾಗಿ ಟಿ.ವಿ. ಯಂತಹ ಮಾಧ್ಯಮಗಳಲ್ಲಿ ಪ್ರದರ್ಶಿಸುತ್ತಾರೆ. ಆದರೆ ವಿರೋಧಾಭಾಸವೋ ಎಂಬಂತೆ, ಭಾರತದಲ್ಲಿ ಪ್ರತಿದಿನ ಹಸಿವೆಯಿಂದ ಮತ್ತು ಅತಿಸಾರದಿಂದ ನರಳುವ ಅಸಂಖ್ಯಾತ ಬಡಮಕ್ಕಳ ಬಗ್ಗೆ ಯಾರಿಗೂ ತಿಳಿದಿಲ್ಲ. ಅತ್ಯಾಧುನಿಕ ಸಲಕರಣೆಗಳಿಂದ ಕೂಡಿದ ಆಸ್ಪತ್ರೆಗಳು ತಾವೇ ಮನುಕುಲದ ರಕ್ಷಕರೆಂದು ಪ್ರಚಾರ ಮಾಡಿಕೊಳ್ಳುತ್ತಿವೆ. ಈ ಭರವಸೆಗೆ ಮರುಳಾದ ಜನಸಾಮಾನ್ಯರು ಈ ಬಗೆಯ ಪ್ರಚಾರದ ಬೋನಿಗೆ ಬೀಳುವುದು ಮುಂದುವರಿಯುತ್ತಲೇ ಇದೆ. ಇಡೀ ಜಗತ್ತನ್ನು ಆರೋಗ್ಯಪೂರ್ಣವಾಗಿ ಇರಿಸಲು ಹೆಚ್ಚು ಹೆಚ್ಚು ಹೈಟೆಕ್ ಆಸ್ಪತ್ರೆಗಳೂ ತಜ್ಞವೈದ್ಯರೂ ಅಗತ್ಯವೆಂದು ನಮ್ಮ ಸರ್ಕಾರವೂ ಭಾವಿಸಿದಂತಿದೆ. **ಆದರೆ ನಿಜವಾಗಿ ಹೇಳುವುದಾದರೆ, ಆರೋಗ್ಯ ರಕ್ಷಣೆಯೇ ಬೇರೆ, ವೈದ್ಯಕೀಯ ಚಿಕಿತ್ಸೆಯೇ ಬೇರೆ. ಇವೆರಡೂ ಒಂದು ಎಂದು ಭ್ರಮಿಸಲಾಗಿರುವುದು ಈ ಆಧುನಿಕ ಕಾಲದ ಅತ್ಯಂತ ದುರದೃಷ್ಟಕರ ಸಂಗತಿ. ಅದಲ್ಲದೆ, ಪಟ್ಟಭದ್ರ ಹಿತಾಸಕ್ತಿಗಳು ಜಗತ್ತಿನಾದ್ಯಂತ ಇಂದು ರೋಗ–ವ್ಯಾಪಾರದಲ್ಲಿ ತೊಡಗಿರುವುದು ಗಾಬರಿಪಡಿಸುವ ವಿಷಯ.**

## ಅಮೆರಿಕದಲ್ಲಿ ಆರೋಗ್ಯ ವ್ಯವಸ್ಥೆ (ಅವಸ್ಥೆ)

ಇದಕ್ಕೆ ಉತ್ತಮ ನಿದರ್ಶನವಾಗಿ ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರವಾದ ಅಮೆರಿಕವನ್ನೇ ತೆಗೆದುಕೊಳ್ಳೋಣ. ಅಲ್ಲಿ ಪ್ರತಿ ಶಿಶುವಿಗೂ ೨೦ ಲಸಿಕೆಗಳನ್ನು ಕಡ್ಡಾಯವಾಗಿ ನೀಡಲಾಗುತ್ತದೆ. ಬಾಲ್ಯದಿಂದ ಪ್ರಾರಂಭಿಸಿ ಪ್ರತಿಯೊಬ್ಬರೂ ಪ್ರತಿದಿನ ಮಲ್ಟಿ ವಿಟಮಿನ್ ಮಾತ್ರೆಗಳನ್ನು ನುಂಗುತ್ತಾರೆ. ಹೃದಯಾಘಾತವನ್ನು ತಡೆಯುತ್ತದೆಯೆಂಬ ಹುಸಿ ಭರವಸೆಯಿಂದ ಪ್ರತಿ ವಯಸ್ಕರೂ ಅಲ್ಪ ಪ್ರಮಾಣದ ಆಸ್ಪಿರಿನ್ ಅನ್ನು ಪ್ರತಿ ದಿನ ಸೇವಿಸುತ್ತಾರೆ. ಹೆಚ್ಚುಕಡಿಮೆ ಪ್ರತಿಯೊಬ್ಬರೂ ಕೊಲೆಸ್ಟರಾಲ್, ಮಧುಮೇಹ (ಡಯಾಬಿಟಿಸ್) ಮತ್ತು ರಕ್ತದ ಒತ್ತಡ ಕಡಿಮೆ ಮಾಡುವ ಮಾತ್ರೆಗಳನ್ನು ನುಂಗುತ್ತಾರೆ. ಅಲ್ಲಿ ನಿಯತಕಾಲಿಕ ವೈದ್ಯತಪಾಸಣೆ ಎಷ್ಟು ಸಾಮಾನ್ಯವೆಂದರೆ, ಮಧ್ಯಮ ವರ್ಗಕ್ಕೆ ಸೇರಿದವರಷ್ಟೇ ಅಲ್ಲದೆ, ದಿನದ ಎರಡು ಊಟಕ್ಕೂ ಪರದಾಡುವ ದಟ್ಟ ದರಿದ್ರರೂ ಕೂಡ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದನ್ನು ರೂಢಿಸಿಕೊಂಡಿದ್ದಾರೆ. ಅಮೆರಿಕನ್ನರ ಜೀವನಶೈಲಿ ಕೂಡ ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಬಹಳ ಸುಧಾರಣೆಗೊಂಡಿದೆ. ವಯಸ್ಕರಲ್ಲಿ ಧೂಮಪಾನ–ಮದ್ಯಪಾನಗಳಂತಹ ದುಶ್ಚಟಗಳು ಬಹುಮಟ್ಟಿಗೆ ಕಡಮೆಯಾಗಿವೆ. ಅನೇಕ ಸುಶಿಕ್ಷಿತರು ಅಂಗಡಿಗಳಲ್ಲಿ ಸಿಗುವ ಸಿದ್ಧ ತಿಂಡಿತಿನಿಸುಗಳ ಬಳಕೆಯನ್ನು ನಿಲ್ಲಿಸಿ, ಸಸ್ಯಾಹಾರದತ್ತ ಒಲುವು ತೋರಿಸತೊಡಗಿದ್ದಾರೆ. ಹೀಗಾಗಿ ಮ್ಯಾಕ್–ಡೊನಾಲ್ಡ್‌ನಂತಹ ದೊಡ್ಡದೊಡ್ಡ ಸಿದ್ಧ ಆಹಾರಪದಾರ್ಥಗಳ ಜಾಲಗಳು ಆರೋಗ್ಯಕರ ಆಹಾರಪದಾರ್ಥಗಳ ಉತ್ಪಾದನೆ ಮತ್ತು ಮಾರಾಟಗಳನ್ನು ಆರಂಭಿಸಿವೆ.

ಆದರೂ ಜನರ ಆರೋಗ್ಯ ಪರಿಸ್ಥಿತಿ ಮತ್ತು ಸರಾಸರಿ ಆಯುಸ್ಸುಗಳಿಗೆ ಸಂಬಂಧಿಸಿದಂತೆ ಈಚೆಗೆ ನಡೆದ ಒಂದು ಅಧ್ಯಯನದ ಪ್ರಕಾರ, ಹದಿನಾಲ್ಕು ಕೈಗಾರಿಕಾಪ್ರಧಾನ ರಾಷ್ಟ್ರಗಳ ಮಧ್ಯೆ ಅಮೆರಿಕಾ ದೇಶಕ್ಕೆ ದೊರೆತಿರುವುದು ಹದಿಮೂರನೆಯ ಸ್ಥಾನ. ಮೊದಲನೆಯ ಸ್ಥಾನವನ್ನು ಗಳಿಸಿರುವ ದೇಶವೆಂದರೆ ಜಪಾನ್ ಮತ್ತು ಹದಿನಾಲ್ಕನೆಯ ಸ್ಥಾನವನ್ನು ಗಳಿಸಿರುವ ದೇಶವೆಂದರೆ ಜರ್ಮನಿ. ಅಮೆರಿಕದ ೭೯ ಮಿಲಿಯನ್ ಜನರು ಪ್ರತಿವರ್ಷ ಔಷಧ ಸೇವನೆಯ ಪ್ರತಿಕೂಲ ಪರಿಣಾಮಗಳಿಗೆ (Adverse Drug Reaction - ADR) ಈಡಾಗಿ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಹೊರರೋಗಿಗಳ ಚಿಕಿತ್ಸೆಗಾಗಿಯೇ ಅಲ್ಲಿ ಪ್ರತಿವರ್ಷ ೮೦ ಬಿಲಿಯನ್ ಡಾಲರುಗಳಷ್ಟು ಹಣ ವ್ಯಯವಾಗುತ್ತಿದೆ. ಮೇಲೆ ಹೇಳಿದ ೭೯ ಮಿಲಿಯನ್ ಎ.ಡಿ.ಆರ್. ರೋಗಿಗಳಲ್ಲಿ ಸುಮಾರು ೧,೪೦,೦೦೦ ಜನರು ಪ್ರತಿವರ್ಷ ಸಾವನ್ನಪ್ಪುತ್ತಾರೆ. ಬಹುತೇಕ ಅಮೆರಿಕನ್ನರು ವೈದ್ಯರ ಸಲಹೆಸೂಚನೆಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸುವುದಿಲ್ಲ ಎಂಬ ಆಘಾತಕರ ವಿಷಯವೂ, ಇನ್ನೊಂದು ಪ್ರತ್ಯೇಕ ಅಧ್ಯಯನದಿಂದ ಬೆಳಕಿಗೆ ಬಂದಿದೆ. ಪ್ರತಿದಿನ ಮೂರಕ್ಕಿಂತ ಹೆಚ್ಚು ಮಾತ್ರೆಗಳನ್ನು ಸೇವಿಸಬೇಕೆಂದು ವೈದ್ಯರು ಸೂಚಿಸಿದ ಸಂದರ್ಭಗಳಲ್ಲಿ, ಅದನ್ನು ಕಟ್ಟುನಿಟ್ಟಾಗಿ ಅನುಸರಿಸುವವರು

---

*ಲೇಖಕರು ಮಣಿಪಾಲ್ ವಿಶ್ವವಿದ್ಯಾನಿಲಯದ ನಿವೃತ್ತ ಉಪಕುಲಪತಿಗಳು. ಪ್ರಖ್ಯಾತ ವೈದ್ಯಕೀಯ ಬರಹಗಾರರು, ಪ್ರಸಿದ್ಧ ಭಾಷಣಕಾರರು.*

ಶೇ. ೨೮ ಮಂದಿ ಮಾತ್ರ! ಅಮೆರಿಕದಲ್ಲಿರುವ ರೋಗಗ್ರಸ್ತರಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವವರು ಈ ಬಗೆಯ ADR ರೋಗಿಗಳೇ! ಇದು ಸಮಸ್ಯೆಯ ತೀವ್ರತೆಯನ್ನು ಸೂಚಿಸುತ್ತದೆ. "ನಿಮ್ಮಲ್ಲಿ ಇಂಥಿಂಥ ತೀವ್ರ ರೋಗಗಳ ಲಕ್ಷಣಗಳು ಕಂಡುಬರುತ್ತಿವೆ" ಎಂದು 'ಊಹಿಸಿ' ಹೇಳುವ ವೈದ್ಯಮಹಾಶಯರು, ತಮ್ಮ ಬಳಿ ಬಂದವರಲ್ಲಿ ಯಾರನ್ನೂ ಬಿಡದೆ, ಪ್ರತಿಯೊಬ್ಬ ಸಂದರ್ಶಕನಿಗೂ ಹತ್ತಾರು ಬಗೆಯ ಔಷಧಿಗಳನ್ನು ಬರೆದುಕೊಡುತ್ತಾರೆ. ಆರೋಗ್ಯಶಾಲಿ ಜನರು ಕೂಡ ಆಗಾಗ ವೈದ್ಯಕೀಯ ತಪಾಸಣೆಯ ನರಕಯಾತನೆಗೆ ಒಳಗಾಗುವ ದುರ್ಭರ ಪ್ರಸಂಗ ಒದಗಿಬಂದಿರುವುದು ಮೇಲೆ ಹೇಳಿದ ವೈದ್ಯಮಹಾಶಯರ ದುರಾಸೆಯ ಪರಿಣಾಮವಲ್ಲದೆ ಬೇರಲ್ಲ.

ತೀವ್ರ ನಿಗಾ ಘಟಕಗಳಲ್ಲಿ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳ ಆರೈಕೆ ಮತ್ತು ಚಿಕಿತ್ಸೆಯಲ್ಲಿ ಹೆಚ್ಚು ಎಚ್ಚರಿಕೆಯನ್ನು ವಹಿಸಬೇಕಾದುದು ಅಗತ್ಯವಷ್ಟೆ. ಇಂತಹ ಸಂದರ್ಭಗಳಲ್ಲಿ ಚಿಕಿತ್ಸಾ ವಿಧಾನವನ್ನು ನಡುನಡುವೆ ಬದಲಾಯಿಸುತ್ತ ಇರುವುದು ಸೂಕ್ತವಲ್ಲ. ಆದರೆ ಅಮೆರಿಕದಲ್ಲಂತೂ ದೋಷಪೂರ್ಣ ಚಿಕಿತ್ಸಾ ಕ್ರಮಗಳು ಮತ್ತು ಅಸಮರ್ಪಕ ಆರೈಕೆ ಮತ್ತು ಪರಿಸರ ದೋಷಗಳಿಂದ ಉಂಟಾಗುವ ಸೋಂಕುಗಳು ರೋಗಿಗಳ ಸಾವಿಗೆ ಪ್ರಮುಖ ಕಾರಣಗಳಾಗಿವೆ ಎನ್ನುವುದು ವಿಪರ್ಯಾಸದ ಸಂಗತಿ. ಅತ್ಯಧಿಕ ಪ್ರಮಾಣದಲ್ಲಿ ಜನರು ಕ್ಯಾನ್ಸರ್ ಮತ್ತು ಹೃದಯಾಘಾತಗಳಿಗೆ ಒಳಗಾಗುತ್ತಿರುವುದಕ್ಕೂ ಇವುಗಳೇ ಕಾರಣವಂತೆ.

೧೯೩೦ ರ ದಶಕದಲ್ಲಿ ಅಮೆರಿಕದಲ್ಲಿ ತೀವ್ರ ಆರ್ಥಿಕ ಮುಗ್ಗಟ್ಟು ಉಂಟಾಯಿತು. ಅಂದಿನಿಂದ ಈಚೆಗೆ ಅಮೆರಿಕನ್ನರ ಆರೋಗ್ಯ ಪರಿಸ್ಥಿತಿ ಸುಧಾರಿಸಿರುವುದೇನೋ ನಿಜ. ಆದರೆ ಅದಕ್ಕೆ ಶೇ. ೬೦ ರಷ್ಟು ಸಿವಿಲ್ ಇಂಜಿನಿಯರ್‌ಗಳು ಕಾರಣಕರ್ತರೇ ಹೊರತು ವೈದ್ಯರಲ್ಲ. ಈ ಸಂಗತಿ ವಿಚಿತ್ರವೆಂಬಂತೆ ತೋರಿದರೂ ಸತ್ಯವಾದುದು. ಅಮೆರಿಕದಲ್ಲಿ ವೈದ್ಯರಿಗಿಂತ ಹೆಚ್ಚಾಗಿ ಸಿವಿಲ್ ಇಂಜಿನಿಯರ್‌ಗಳೇ ಜನರ ಆರೋಗ್ಯ ರಕ್ಷಣೆಯ ಹೊಣೆ ಹೊತ್ತಿದ್ದಾರೆ! ಏಕೆಂದರೆ ಅವರು ಪರಿಶುದ್ಧ ಕುಡಿಯುವ ನೀರನ್ನೂ, ಅತ್ಯುತ್ತಮ ನೈರ್ಮಲ್ಯ ವ್ಯವಸ್ಥೆಯನ್ನೂ, ಸುಸಜ್ಜಿತವಾಗಿ ನಿರ್ಮಿಸಲಾದ ಮನೆಗಳು, ರಸ್ತೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಜನರಿಗೆ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಸೋಂಕು ರೋಗಗಳ ಉಗಮ ಮತ್ತು ಹರಡುವಿಕೆಯನ್ನು ಆ ದೇಶದಲ್ಲಿ ಪರಿಣಾಮಕಾರಿಯಾಗಿ ನಿಯಂತ್ರಿಸಲಾಗಿದೆ. ಈ ದಿಶೆಯಲ್ಲಿ ಅಮೆರಿಕದ ವೈದ್ಯಕೀಯ ರಕ್ಷಣಾ ವ್ಯವಸ್ಥೆ ಪರಿಣಾಮಕಾರಿಯಾಗಿರುವುದು ಶೇ.೩.೪ ರಷ್ಟು ಮಾತ್ರ. ಈಗೀಗ ಅಮೆರಿಕದ ವೈದ್ಯಕೀಯ ರಕ್ಷಣಾವ್ಯವಸ್ಥೆಯೂ ಶಿಥಿಲವಾಗತೊಡಗಿದೆ. ಪರಿಸರ ಮಾಲಿನ್ಯ ಮತ್ತು ಜಾಗತಿಕ ತಾಪಮಾನದಲ್ಲಿನ ಏರಿಕೆಗಳೇ ಇದಕ್ಕೆ ಕಾರಣ. ಇದರಿಂದಾಗಿ ಅಮೆರಿಕದಲ್ಲಿಯೂ ಕೂಡ ಹೊಸ ಹೊಸ ಸಾಂಕ್ರಾಮಿಕ ರೋಗಗಳು ಹೊರಗಿನಿಂದ ಬಂದು ಹರಡುತ್ತಿವೆ.

### ಭಾರತ ಕಲಿಯಬೇಕಾಗಿರುವ ಪಾಠ

ಈ ಹಿನ್ನೆಲೆಯಲ್ಲಿ ಭಾರತ ಕಲಿಯಬೇಕಾಗಿರುವ ಪಾಠವಾದರೂ ಏನು? ವೈದ್ಯಕೀಯ ರಕ್ಷಣೆಯನ್ನು ಆ ಕ್ಷೇತ್ರದಲ್ಲಿ ಸರಕಾರಿ ಆಸ್ಪತ್ರೆಗಳೊಂದಿಗೆ ಕೂಡಿಕೊಂಡು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಸೇವಾಸಂಸ್ಥೆಗಳಿಗೆ ವಹಿಸಿಕೊಡಬೇಕು. ಸರ್ಕಾರವು ವೈದ್ಯಕೀಯ ವ್ಯವಸ್ಥೆಯನ್ನು ಸರಳ ಮತ್ತು ಜನ ಸಾಮಾನ್ಯರಿಗೆ ಸುಲಭವಾಗಿ ಎಟುಕುವಂತಹ ಪರಿಣಾಮಕಾರಿ ವ್ಯವಸ್ಥೆಯನ್ನಾಗಿ ಮಾರ್ಪಡಿಸುವುದು ಇಂದು ತುರ್ತಾಗಿ ಆಗಬೇಕಾಗಿರುವ ಸಂಗತಿ. ಸರ್ಕಾರಿ ಆಸ್ಪತ್ರೆಗಳು ಈ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆಯಾದ್ದರಿಂದ, ಸರ್ಕಾರವು ಪಂಚತಾರಾ ಆಸ್ಪತ್ರೆಗಳು ಮತ್ತು ದುಬಾರಿ ರೋಗನಿದಾನ ಸೌಲಭ್ಯಗಳಿಗಾಗಿ ತನ್ನ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳನ್ನು ವ್ಯಯಮಾಡದೆ ತನ್ನ ಸುಪರ್ದಿನಲ್ಲಿರುವ ಸರ್ಕಾರಿ ಆಸ್ಪತ್ರೆಗಳನ್ನು ಅಭಿವೃದ್ಧಿಗೊಳಿಸುವ ಕಡೆ ಗಮನ ನೀಡಬೇಕು.

ಪರಿಪೂರ್ಣ ಮಿದುಳು ಹೊಂದಿರುವ ಉತ್ಕೃಷ್ಟ ದೇಹದ ನಿರ್ಮಾಣವು ಪ್ರಪಂಚದ ಅತಿ ದೊಡ್ಡ ಸಮಸ್ಯೆಯೂ ಹೌದು, ಮಾನವ ಜನಾಂಗದ ಅತಿ ದೊಡ್ಡ ಆಶಾಕಿರಣವೂ ಹೌದು.

– *ಡಿಯೋ ಲೆಯಿಸ್*

**ಆರೋಗ್ಯಪಾಲನೆಯು ಒಬ್ಬನ ನೈತಿಕ ಮತ್ತು ಧಾರ್ಮಿಕ ಕರ್ತವ್ಯ. ಏಕೆಂದರೆ, ಆರೋಗ್ಯವು ಸಾಮಾಜಿಕ ಸ್ವಾಸ್ಥ್ಯದ ಆಧಾರವಾಗಿದೆ. ನಾವು ಅನಾರೋಗ್ಯದಿಂದಿದ್ದರೆ ಸಮಾಜಕ್ಕೆ ನೆರವಾಗಲಾರೆವು.**

– *ಜಾನ್‌ಸನ್*

ಇನ್ನೊಂದು ಪ್ರಮುಖವಾದ ಅಂಶವೆಂದರೆ, **ಸಾರ್ವಜನಿಕರ ಆರೋಗ್ಯ ರಕ್ಷಣೆಯ ಸಂಪೂರ್ಣ ಹೊಣೆಯನ್ನು ಸರ್ಕಾರವೇ ಹೊತ್ತುಕೊಳ್ಳಬೇಕು.** ಆರೋಗ್ಯ ರಕ್ಷಣೆಯೆಂದರೆ, ಕೇವಲ ವೈದ್ಯಕೀಯ ಚಿಕಿತ್ಸೆಯಲ್ಲ ಎಂದು ಹಿಂದೆಯೇ ಹೇಳಿದ್ದೇವೆ. ಆದ್ದರಿಂದ ಸರ್ಕಾರವು ಪ್ರತಿಯೊಬ್ಬರಿಗೂ ಪರಿಶುದ್ಧ ಕುಡಿಯುವ ನೀರನ್ನು ಒದಗಿಸಬೇಕು. ಶುದ್ಧವಾದ ಕುಡಿಯುವ ನೀರಿನ ಪೂರೈಕೆಯಿಂದ, ಸರ್ಕಾರಿ ಆಸ್ಪತ್ರೆಗಳಲ್ಲಿನ ಸುಮಾರು ಶೇ. ೬೦ ರಷ್ಟು ಹಾಸಿಗೆಗಳು ಖಾಲಿಯಾಗುತ್ತವೆ. ಪ್ರತಿಯೊಬ್ಬರಿಗೂ ಮಾನವ ಜನ್ಯ ಮತ್ತು ಪ್ರಾಣಿಜನ್ಯ ಮಲಮೂತ್ರಗಳಿಂದ ಕಲುಷಿತವಾಗದ ಪರಿಶುದ್ಧ ಆಹಾರ ದೊರೆಯುವಂತಾದರೆ, ಆಗ ಆಸ್ಪತ್ರೆಗಳ ಇನ್ನೂ ಶೇ.೧೦ ರಷ್ಟು ಹಾಸಿಗೆಗಳು ಖಾಲಿಯಾಗುತ್ತವೆ. ಸಮರ್ಪಕವಾದ ನೈರ್ಮಲ್ಯ ವ್ಯವಸ್ಥೆಯನ್ನು ಸರ್ಕಾರವು ಹಳ್ಳಿಗಳಲ್ಲಿ ಮತ್ತು ನಗರಪ್ರದೇಶದ ಕೊಳೆಗೇರಿಗಳಲ್ಲಿ ಒದಗಿಸಿದರೆ, ಆಸ್ಪತ್ರೆಗೆ ದಾಖಲಾಗಬೇಕಾದ ಸಂದರ್ಭಗಳನ್ನು ಬಹುತೇಕ ತಪ್ಪಿಸಬಹುದು. ಕಲುಷಿತಗೊಂಡ ಆಹಾರ ಮತ್ತು ನೀರಿನಿಂದ ಉತ್ಪನ್ನವಾಗುವ ಮಾರಕ ಕೊಕ್ಕೆಹುಳುಗಳಿಂದಾಗಿ ಭಾರತದಲ್ಲಿ ಬಡ ಹಸುಳೆಗಳ ಆರೋಗ್ಯ ಹದಗೆಡುತ್ತಿದೆ; ಅವರ ಅಧ್ಯಯನದ ಸಾಮರ್ಥ್ಯ ಕುಗ್ಗುತ್ತಿದೆ. ಗ್ರಾಮಗಳಲ್ಲಿ ಪ್ರತಿಯೊಂದು ಮನೆಗೂ ಶೌಚಾಲಯ ಸೌಲಭ್ಯವನ್ನು ಒದಗಿಸುವ ಮೂಲಕ ನಮ್ಮ ದೇಶದ ಜನರ ಒಟ್ಟಾರೆ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯ. ಆದರೆ ಗ್ರಾಮಸ್ಥರಿಗೆ, ಅಶಿಕ್ಷಿತರಿಗೆ ಶೌಚಾಲಯಗಳನ್ನು ಸರಿಯಾಗಿ ಬಳಸುವ ಕ್ರಮವನ್ನು ಹೇಳಿಕೊಡಬೇಕು. *(ಗ್ರಾಮಗಳಲ್ಲಿ ಸರ್ಕಾರ ಕಟ್ಟಿಸಿಕೊಟ್ಟಿರುವ ಬಹುತೇಕ ಶೌಚಾಲಯಗಳು ಸರಿಯಾದ ನಿರ್ವಹಣೆಯಿಲ್ಲದೆ, ಅನುಪಯೋಗಕರವೂ ಅಂಟುಜಾಡ್ಯಗಳ ತಂಗುದಾಣವೂ ಆಗಿರುವುದು ದುರ್ದೈವದ ಸಂಗತಿ –ಸಂ.)*

(ಮುಂದುವರಿಯುವುದು)